SEPTEMBER 21, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಕೇಂದ್ರ ನಿಗದಿಪಡಿಸಿದ, ಹತ್ತು ಪ್ರಮುಖ ಮಾನದಂಡಗಳಡಿ, ರಾಜ್ಯದ 200ಕ್ಕೂ ಹೆಚ್ಚು ತಾಲೂಕುಗಳನ್ನು, ಬರಪೀಡಿತ ಎಂದು ಘೋಷಿಸುವ ನಿರೀಕ್ಷೆಯಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಕಂದಾಯ ಖಾತೆ ಸಚಿವ, ಡಾಕ್ಟರ್ ಜಿ.ಪರಮೇಶ್ವರ, ಸ್ಪಷ್ಟ ಪಡಿಸಿದ್ದಾರೆ. ಉಪಗ್ರಹ ಚಿತ್ರಗಳು ಮತ್ತು ದತ್ತಾಂಶಗಳನ್ನು ಆಧರಿಸಿ, ಬರಪೀಡಿತ ತಾಲೂಕು ಎಂದು, ಘೋಷಿಸಲಾಗುತ್ತದೆ. 125 ತಾಲೂಕುಗಳನ್ನು, ಎರಡು ಹಂತಗಳಲ್ಲಿ, ಈಗಾಗಲೇ ಬರ ಪೀಡಿತ ಎಂದು ಪ್ರಕಟಿಸಲಾಗಿದೆ. ಇನ್ನು 52 ತಾಲೂಕುಗಳನ್ನು ಬರ ಬಾಧಿತ ಎಂದು ಘೋಷಿಸುವ ಸಾಧ್ಯತೆಯಿದೆ, ಎಂದರು. ಮೊದಲ ಹಂತದಲ್ಲಿ, 18 ಸಾವಿರ ಕೋಟಿ ರೂಪಾಯಿ ಬರ ನಷ್ಟ ಅಂದಾಜಿಸಲಾಗಿದೆ. ಕೇಂದ್ರದಿಂದ, ಮೂರುವರೆ ಸಾವಿರ ಕೋಟಿ ರೂಪಾಯಿ ಪರಿಹಾರ ಬಿಡುಗಡೆಗೆ, ಕೋರಲಾಗಿದೆ ಎಂದು, ಸಚಿವ ಪರಮೇಶ್ವರ ಹೇಳಿದ್ದಾರೆ.

<><><>

ಇಂದು ರಾಜ್ಯ ವಿಧಾನಮಂಡಲದ, ವಿಶೇಷ ಅಧಿವೇಶನ ಆರಂಭಗೊಂಡಿದೆ. ಮೂರು ದಿನಗಳ ಕಾಲ ಅಧಿವೇಶನ ಆಯೋಜಿತವಾಗಿದೆ.

<><><>

ಮಲೆನಾಡು–ಕರಾವಳಿ ಭಾಗದ ಜನರ ಹಿತರಕ್ಷಣೆ ಸರ್ಕಾರದ ಮೊದಲ ಆದ್ಯತೆಯಾಗಿದೆ. ವಿಶೇಷ ಅಧಿವೇಶನದಲ್ಲಿ ಡಾಕ್ಟರ ಕಸ್ತೂರಿ ರಂಗನ್ ವರದಿ, ಅನ್ನದಾತ ರೈತರ ಸಮಸ್ಯೆಗಳು ಹಾಗೂ ಬರಗಾಲ ಪರಿಹಾರ ಕ್ರಮಗಳ ಕುರಿತು ಮಹತ್ವದ ಚರ್ಚೆ ನಡೆಯಲಿದೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಸಾಮಾಜಿಕ ಜಾಲತಾಣ ಎಕ್ಸ್ ಖಾತೆ ಮೂಲಕ ತಿಳಿಸಿದ್ದಾರೆ.

<><><>

ಧಾರವಾಡ ಅಲ್ಫಾನ್ಸೋ, ಬದಾಮ ಮಾವು 'ಒಂದು ಜಿಲ್ಲೆ, ಒಂದು ಉತ್ಪನ್ನ' ಯೋಜನೆ ಅಡಿ ಆಯ್ಕೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಕಿರು ಆಹಾರ ಉತ್ಪನ್ನಗಳ ನಿಯಮಬದ್ಧಗೊಳಿಸುವಿಕೆ ಯೋಜನೆ–ಪಿ.ಎಂ.ಎಫ್.ಎಂ.ಇ ಅಡಿ, ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ, ಮಾವಿನ ಮೌಲ್ಯವರ್ಧಿತ ಉತ್ಪನ್ನಗಳ ಕುರಿತು ಆಹಾರ ಸಂಸ್ಕರಣೆ ಉದ್ಯಮದಾರರು, ಮಹಿಳೆಯರಿಗೆ  ಸೂಕ್ತ ಮಾರ್ಗದರ್ಶನ ನೀಡಲಾಗುತ್ತಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವಿಶ್ವವಿದ್ಯಾಲಯದ ಆಹಾರ ಸಂಸ್ಕರಣೆ ವಿಭಾಗದ ಮುಖ್ಯಸ್ಥರಾದ ಡಾಕ್ಟರ ಹೇಮಲತಾ.....

<><><>

ಡಾಕ್ಟರ ಹೇಮಲತಾ ಧ್ವನಿ– 39 ಸೆಕೆಂದುಗಳು

<><><>

ಧಾರವಾಡದ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಈ ತಿಂಗಳ 25ನೇ ತಾರೀಖಿನಿಂದ 28ರ ವರೆಗೆ ನಾಲ್ಕು ದಿನಗಳ, ರೈತ ಜಾತ್ರೆ, ಕೃಷಿ ಮೇಳ ಆಯೋಜಿಸಿದೆ. ಕೃಷಿ ವಿಶ್ವವಿದ್ಯಾಲಯದ, ವಿಸ್ತರಣಾ ನಿರ್ದೇಶಕರಾದ, ಎನ್. ಮಂಜುಳಾ ಮಾಹಿತಿ ನೀಡಿ, ಕೃಷಿಮೇಳದಲ್ಲಿ "ಹೈಟೆಕ್ ತೋಟಗಾರಿಕೆ ಹಾಗೂ ಔ ಧಿ ಸಸ್ಯಗಳ ಸಮಿತಿ" ಫಲಪು ಪ್ ಪ್ರದರ್ಶನ ಏರ್ಪಡಿಸಿದ್ದು, ರೈತ ಬಾಂಧವರು, ವಿವಿಧ ಮಾದರಿಯ ಫಲಪು ಪ್, ಔ ಧಿ, ಸುಗಂಧ ದ್ರವ್ಯ, ಬೋನ್ಸಾಯ್, ಪು ಪ್ ಜೋಡಣೆ, ತರಕಾರಿಯಲ್ಲಿ ಕೆತ್ತನೆ, ಎಲೆಗಳಲ್ಲಿ ಚಿತ್ರ ರಚನೆ, ಒಣ ಹೂವುಗಳ ಕಲಾತ್ಮಕ ಮಾದರಿ ಪ್ರದರ್ಶಿಸಲು ಅವಕಾಶವಿದೆ.

<><><>

ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ಕೃಷಿ ಮೇಳದಲ್ಲಿ ಕೃಷಿ ನವೋದ್ಯಮಿಗಳ ಸ್ಟಾರ್ಟ್‌ಅಪ್‌ಗಳಿಂದ, 'ಸ್ಮಾರ್ಟ್ ಫಾರ್ಮಿಂಗ್', ಸಕ್ಷಮ ಕೃಷಿ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ಜರುಗಲಿದೆ. ಬಾಹ್ಯಾಕಾಶ ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ, ಬೆಳೆ ಮೇಲ್ವಿಚಾರಣೆ ಹಾಗೂ ಸಲಹಾ ವ್ಯವಸ್ಥೆ ಮತ್ತು ಬೀಜ ಮೊಳಕೆಯೊಡೆಯುವಿಕೆಯ, ಗುಣಮಟ್ಟ ಪರೀಕ್ಷಿಸುವ ಮೊಬೈಲ್ ಆ್ಯಪ್, ಪ್ರಾತ್ಯಕ್ಷಿಕೆಯಲ್ಲಿ ಇರಲಿವೆ. ಕೇಂದ್ರದ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ – ಇನ್ನೋವೇ ನ್ ಮತ್ತು ಕೃಷಿ ಉದ್ಯಮಶೀಲತೆ ಯೋಜನೆ ಅಡಿ, ಪ್ರವರ್ತಿತ ಸಾರ್ಟ್‌ಅಪ್‌ಗಳು, ಮಳಿಗೆ ಸಂಖ್ಯೆ 308 ರಿಂದ 312ರ ವರೆಗೆ, ಸಜ್ಜುಗೊಳಿಸಲಾಗಿದೆ.

<><><>

ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ ಎಂ. ವೆಂಕಟೇಶ ಕುಮಾರ, ಪ್ರಸಕ್ತ ಸಾಲಿನ ಶ್ರೀ ಚೆನ್ನರೇಣುಕ ಬಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೀದರ ಜಿಲ್ಲೆ, ಹಾರಕೂಡದಲ್ಲಿ ಅಕ್ಟೋಬರ್ 19 ರಂದು ನಡೆಯಲಿರುವ, ಲಿಂಗೈಕ್ಯ ಗುರುಲಿಂಗ ಶಿವಾಚಾರ್ಯರ 57 ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನವಾಗಲಿದೆ. ಪ್ರಶಸ್ತಿ ಒಂದು ಲಕ್ಷ ರೂಪಾಯಿ ನಗದು ಹಾಗೂ ಎರಡು ತೊಲ ಚಿನ್ನದ ಪದಕ ಒಳಗೊಂಡಿದೆ ಎಂದು ಹಾರಕೂಡದ, ಡಾಕ್ಟರ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

<><><>

ಚಾಮರಾಜನಗರ ಜಿಲ್ಲೆ, ಹನೂರು ತಾಲೂಕಿನ ವಿವಿಧೆಡೆ ಮಳೆಯಾಗಿದೆ. ಲೊಕ್ಕನಹಳ್ಳಿ ಗ್ರಾಮದ ಸುಮಾರು 50 ಕ್ಕೂ ಅಧಿಕ ಮನೆಗಳಿಗೆ ನೀರು ನುಗ್ಗಿದ್ದು, ಆಹಾರ ಪದಾರ್ಥಗಳು, ಎಲೆಕ್ಟ್ರಾನಿಕ್ ವಸ್ತುಗಳು ಹಾನಿಗೀಡಾಗಿವೆ. ವೈಶಂಪಾಳ್ಯ ಗ್ರಾಮದ ರೈತ ರಾಮಸ್ವಾಮಿ ಎಂಬವರ ಮನೆ ಕುಸಿದಿದೆ. ಬಂಡಳ್ಳಿ ಗ್ರಾಮದಲ್ಲಿ ಗಾಳಿ ಮಳೆಗೆ ಕೊಟ್ಟಿಗೆ ಕುಸಿದು, ಒಂದು ಹಸು ಮೃತಪಟ್ಟಿದೆ.

<><><>

ಮುಂದಿನ ಮೂರು ದಿನಗಳ ವರೆಗೆ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ, ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆ, ತಿಳಿಸಿದೆ.

<><><>

ಕೇಂದ್ರ ಯುವ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, 'ವಿಕಸಿತ ಭಾರತ; ಯುವ ನಾಯಕರ ಸಂವಾದ'ದಲ್ಲಿ ಭಾಗವಹಿಸಲು, ಮೈ ಭಾರತ್ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಲು, ವಿಜಯನಗರ ಜಿಲ್ಲೆ, ಯುವಜನ ಸೇವೆ ಅಧಿಕಾರಿ, ಕೋರಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>